ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3341
ಸದಸ್ಯರ ಹೆಸರು : ಶ್ರೀ ಗಡ್ಡದೇವರ ಮಠ್ ಗಡ್ಡಯ್ಯ ಶಿವಮೂರ್ತಯ್ಯ
ಉತ್ತರಿಸುವ ಸಚಿವರು : ಶ್ರೀ ಆರ್. ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಪ್ರಶ್ನೆ	ಉತ್ತರ
ಅ. ಪುರಸಭೆ ಹಾಗೂ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಪ್ರಾಥ ಮಿಕ ಹಾಗೂ ಮಾಧ್ಯಮಿಕ ಶಾಲಾ ಕಟ್ಟಡಗಳು ನಾದುರಸ್ತಿ ಯಾಗ ದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ. ಹಾಗಿದ್ದಲ್ಲಿ, ಈ ತಾರತಮ್ಯ ವನ್ನು ಸರಿಪಡಿಸಲು ಸರಕಾರ ಅನುಸರಿಸುತ್ತಿರುವ ಮಾನದಂಡ ವೇನು;	ಸರ್ವಶಿಕ್ಷಾ ಅಭಿಯಾನ ಯೋಜನೆಯಡಿ, ಪುರ ಸಭೆ ಮತ್ತು ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಶಾಲೆಗಳೂ ಸೇರಿದಂತೆ ನಿರ್ವಹಣೆ ಮತ್ತು ದುರಸ್ತಿ ಕಾರ್ಯಕ್ಕೆ ವಾರ್ಷಿಕ ಪ್ರತಿ ಶಾಲೆಗೆ ರೂ. 5,000/– ಮತ್ತು ಎಲ್ಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯಕ್ಕೆ ವಾರ್ಷಿಕ ಪ್ರತಿ ಶಾಲೆಗೆ ರೂ. 10,000/– ಅನುದಾನ ಮಂಜೂರು ಮಾಡುತ್ತಿದೆ. ಅಲ್ಲದೇ ರಾಜ್ಯವಲಯ ಯೋಜನೇತರದಡಿ ಯಲ್ಲಿಯೂ ದುರಸ್ತಿ ಕಾರ್ಯಕ್ಕೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.
ಇ. ಶಿರಹಟ್ಟಿ ಪಟ್ಟಣ ಪಂಚಾಯಿತಿ ಹಾಗೂ ಲಕ್ಷ್ಮೇಶ್ವರ ಪುರಸಭೆ ಅಡಿಯಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿಗೆ ಕೊಠಡಿ ಗಳನ್ನು ಯಾವಾಗ ಮಂಜೂರು ಮಾಡುವುದು?	ಸರ್ವಶಿಕ್ಷಾ ಅಭಿಯಾನ ಯೋಜನೆಯಡಿ 2004–05ನೇ ಸಾಲಿನಲ್ಲಿ ಶಿರಹಟ್ಟಿ ಪಟ್ಟಣ ಪಂಚಾಯಿತಿಗೆ ಹತ್ತು ಪ್ರಾಥಮಿಕ ಶಾಲಾ ಕೊಠಡಿಗಳನ್ನು ಲಕ್ಷ್ಮೇಶ್ವರ ಪುರಸಭೆಗೆ ಮೂರು ಪ್ರಾಥಮಿಕ ಶಾಲಾ ಕೊಠಡಿ ಗಳನ್ನು ಮಂಜೂರು ಮಾಡಲಾಗಿದೆ. ಅಲ್ಲದೆ ಆರ್. ಐ.ಡಿ.ಎಫ್. ಯೋಜನೆಯಡಿ ಲಕ್ಷ್ಮೇಶ್ವರಕ್ಕೆ ಮೂರು ಕೊಠಡಿ ಹಾಗೂ ರಾಜ್ಯವಲಯ ಯೋಜನೆಯಡಿ ಲಕ್ಷ್ಮೇಶ್ವರ ಪುರಸಭೆಯ ಬಸ್ತಿ ಬಣ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಒಂದು ಕೊಠಡಿ ಮಂಜೂರಾಗಿ ರುತ್ತದೆ.

ಶ್ರೀ ಜಿ.ಎಸ್. ಗಡ್ಡದೇವರ್ ಮಠ್: ಉತ್ತರ ದೊರಕಿದೆ, ಆದರೆ ಉತ್ತರದಲ್ಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವಂಥ ಪ್ರಾಥಮಿಕ ಶಾಲೆಗಳಿಗೆ ಪ್ರತಿ ಶಾಲೆಗೆ ಸರ್ವಶಿಕ್ಷಣ ಅಭಿಯಾನದ ಅಡಿಯಲ್ಲಿ ರಿಪೇರಿಗೆ ಎಂದು ಹೇಳೀ 5 ಸಾವಿರ ರೂ.ಗಳನ್ನು ಪುರಸಭೆಯ ವ್ಯಾಪ್ತಿಯೊಳಗೆ ಬರುವಂಥ ಪ್ರತಿ ಪ್ರಾಥಮಿಕ ಶಾಲೆಗೆ 10 ಸಾವಿರ ರೂ.ಗಳನ್ನು ಪ್ರತಿವರ್ಷ ಕೊಡುತ್ತಿದ್ದೇವೆನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ತೊಂದರೆ ಏನಾಗಿದೆ ಎಂದರೆ, ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವಂಥ ಲಕ್ಷ್ಮೇಶ್ವರ ಪುರಸಭೆಯ ವ್ಯಾಪ್ತಿಯಲ್ಲಿ ಬರುವಂಥ 11 ಶಾಲೆಗಳಲ್ಲಿ 3 ಶಾಲೆಗಳು 1843ನೇ ಇಸ್ವಿಯಲ್ಲಿ ಕಟ್ಟಿಸಿದಂಥ ಕೊಠಡಿಗಳು ಅಲ್ಲಿವೆ. ನಮ್ಮ ಕಡೆ ಹಿರಿಯರು ಒಂದು ಮಾತನ್ನು ಹೇಳುತ್ತಾರೆ. "ಹಳೆಯ ಅರಿವೆಗೆ ದಾರ ದಂಡ" ಬಹುತೇಕ ಪ್ರತಿವರ್ಷ ಈ ಶಾಲೆಗೆ ಇವರು 10 ಸಾವಿರ ರೂ.ಗಳನ್ನು ಖರ್ಚು ಮಾಡಿ ಬಹುತೇಕ ಅವರು ಕಟ್ಟಿಗೆ ಅಥವಾ ಹೆಂಚನ್ನು ಹಾಕುತ್ತಾರೆ. ಹೆಂಚು ಹಾಕಿ ಅವರು ಕೆಳಗೆ ಇಳಿಯುವುದರೊಳಗಾಗಿ ಅ ಹೆಂಚು ಒಡೆದಿರುತ್ತದೆ. ಇವತ್ತಿನವರೆಗೆ ಅಲ್ಲಿ ಇಂತಹ ಪರಿಸ್ಥಿತಿ ಉದ್ಭವವಾಗಿದೆ ಎಂದರೆ, ಬಹುತೇಕ ಮಳೆ ಬಂದರೆ ಅಲ್ಲ, ಸ್ವಲ್ಪ ಮುಗಿಲು ಕಪ್ಪು ಆದರೆ, ಮಕ್ಕಳನ್ನು ಕರೆದುಕೊಂಡು ಗುಡಿಗೆ ಹೋಗುವಂಥ ಪರಿಸ್ಥಿತಿ ಇವತ್ತಿಗೂ 40 ಸಾವಿರ ಜನಸಂಖ್ಯೆ ಇದ್ದಂಥ ಲಕ್ಷ್ಮೇಶ್ವರದಲ್ಲಿ ನಾವು ನೋಡುತ್ತಿದ್ದೇವೆ. ನಾನು ಬಹಳ ನೋವಿನಿಂದ ಇವತ್ತು ತಮ್ಮ ಮುಖೇನವಾಗಿ ಪ್ರೌಢ ಮತ್ತು ಪ್ರಾಥಮಿಕ ಶಿಕ್ಷಣ ಸಚಿವರಲ್ಲಿ ಕೇಳುತ್ತಿದ್ದೇನೆ. ಈ ಪುರಸಭೆಯ ವ್ಯಾಪ್ತಿಯಲ್ಲಿ ಬರುವಂಥ ಈ ಮೂರು ಶಾಲಾ ಕಟ್ಟಡಗಳಿಗೆ 1843 ರಲ್ಲಿ ಕಟ್ಟಡಗಳು ಆಗಿವೆ, ಅವುಗಳನ್ನಾಗಲಿ ಅಥವಾ ಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿ ಬರುವಂಥ ಶಿರಹಟ್ಟಿಯಲ್ಲಿ ಬುರವಂಥ ಒಂದು ಶಾಲೆಯನ್ನು ಪರಿಪೂರ್ಣವಾಗಿ ಹೊಸ ಕಟ್ಟಡವನ್ನು ಮಾಡುವಂಥ ಬಹಳ ಅವಶ್ಯಕವಾಗಿದೆ. ಮಾನ್ಯ ಸಚಿವರಲ್ಲಿ ನಾನು ಕಳಕಳಿಯಿಂದ ಇವತ್ತು ಕೇಳಿಕೊಳ್ಳುತ್ತೇನೆ. ಅದರಲ್ಲಿಯೂ ವಿಶೇಷವಾಗಿ ಒಂದು ಉರ್ದು ಶಾಲೆ ಇದೆ. ನಾನು 1996ರಲ್ಲಿ ಪುರಸಭೆಯ ಅಧ್ಯಕ್ಷನಾಗಿದ್ದಾಗ, 1843ನೇ ಇಸ್ವಿಯಲ್ಲಿ ಕಟ್ಟಿಸಿದಂಥ 3 ಕೋಲಿಯೊಳಗೆ ಇನ್ನುವರೆಗೆ ನಂ–1 ಉರ್ದು ಶಾಲೆ ನಡೆಯುತ್ತಿದೆ. ಅಲ್ಲಿಯೇ ಪಕ್ಕದಲ್ಲಿ ಇದ್ದಂಥ ಒಂದು ದರ್ಗಾದವರು ಸುಮಾರು 6 ಕೊಲಿಗಳನ್ನು ಹೆಂಚು ಶಾಲೆ ಕಲಿಸುವಂಥದ್ದನ್ನು ನಾವು ನೋಡುತ್ತಿದ್ದೇವೆ. ಒಂದು ದಿವಸ ಒಂದು ವಿಷಮಯವಾದ ಪ್ರಸಂಗವನ್ನು ನಾನು ಕಣ್ಣಾರೆ ನೋಡಿದ್ದೇವೆ. ಬಹುತೇಕ ಎಲ್ಲಾ ಮಕ್ಕಳು ಶಾಲೆಗೆ ಸೇರಿದಂಥ ಪ್ರಸಂಗದಲ್ಲಿ ಎಲ್ಲಾ ಮಕ್ಕಳು ಪ್ರಾರ್ಥನೆಯ ಸಂರ್ಭದಲ್ಲಿ ಹೊರಗಡೆ ಬಂದಾಗ 6 ಕೋಲಿಗಳು ಸಹಿತ ಬಿದ್ದು ಹೆಂಚು ಎಲ್ಲಾ ಒಡೆದು ಹೆಂಚು ಕೆದರಿ ಪಾಠ–ಪುಸ್ತಕಗಳನ್ನು ತರುವಂಥ ಪ್ರಸಂಗ ನಮಗೆ ಕಾದಿತ್ತು. ಇಂತಹ ವಿಷಮಯವಾಗದಂತ ಘಟನೆಗಳನ್ನು ನಾವು ಇವತ್ತು

ಅಲ್ಲಿ ಶಾಲೆಯ ಕೊಠಡಿಯ ಅಸ್ತವ್ಯಸ್ತತೆಯನ್ನು, ಇವತ್ತು ಪಟ್ಟಣ ಪಂಚಾಯಿತಿ ಮತ್ತು ಪುರಸಭೆಯ ಹದ್ದಿನಲ್ಲಿ ನಾವು ನೋಡುತ್ತಿದ್ದೇವೆ. ಈ ಆಡಳಿತ ವಿಕೇಂದ್ರೀಕರಣವಾದ ನಂತರ ಇಲ್ಲಿ ಸರ್ಕಾರದವರು ವಿಶೇಷವಾಗಿ ಜಿಲ್ಲಾ ಪಂಚಾಯಿತಿಯ ವ್ಯವಸ್ಥೆಯ ಮೂಲಕ ಕೊಠಡಿಗಳನ್ನು ಹಾಕುವಂಥ ವ್ಯವಸ್ಥೆಯನ್ನು ಮಾಡುತ್ತಾರೆ.

ಉಪಾಧ್ಯಕ್ಷರು: ಮಾನ್ಯ ಗಡ್ಡದೇವರ ಮಠ್, ಇದು ಭಾಷಣ ಅಥವಾ ನಿಮ್ಮ ಪ್ರಶ್ನೆಯೇ?

ಶ್ರೀ ಜಿ.ಎಸ್. ಗಡ್ಡದೇವರ್ ಮಠ್: ಪ್ರಶ್ನೆ ಕೇಳುತ್ತಿದ್ದೇನೆ ಸರ್.

ಉಪಾಧ್ಯಕ್ಷರು: ಪ್ರಶ್ನೆ ಎಷ್ಟಕ್ಕೆ ಸೀಮಿತವಾಗಿರಬೇಕು ಅಲ್ಲವೆ?

ಶ್ರೀ ಗುಡ್ಡ ದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ : ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದು ಇಷ್ಟೆ. ಪರಿಪೂರ್ಣವಾಗಿ ಹೊಸ ಶಾಲೆಗಳನ್ನು ಕಟ್ಟಿಸಲಿಕ್ಕೆ ಸಾಧ್ಯವಿದೆಯೇ ಎನ್ನುವುದು ಹಾಗೂ ನನ್ನ ವ್ಯಾಪ್ತಿಯಲ್ಲಿ ಸುಮಾರು ಮೂರು ಕಾಲೇಜುಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಒಂದು ಕೊಠಡಿಯನ್ನು ಕಟ್ಟಿಸುವ ವ್ಯವಸ್ಥೆಯಾಗಿಲ್ಲ. ಹಾಗಾಗಿ ಮಾನ್ಯ ಸಚಿವರು ನನ್ನ ವ್ಯಾಪ್ತಿಯಲ್ಲಿರುವ ಬರುವ ಪಿ.ಯು. ಕಾಲೇಜುಗಳಿಗೆ ಕೊಠಡಿಗಳನ್ನು, ಕಾಲೇಜುಗಳನ್ನು ಕಟ್ಟಿಸುವಂತಹ ವ್ಯವಸ್ಥೆಯನ್ನು ಮಾಡಬೇಕು ಅಥವಾ ಹಳೆಯ ಕಟ್ಟಡಗಳನ್ನು ಹೊಸದಾಗಿ ಮಾಡಿಕೊಡುವಂತಹ ವ್ಯವಸ್ಥೆಯಲ್ಲಿ ಮುಂದಾಗಲಿಕ್ಕೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ರಾಮಲಿಂಗಾರೆಡ್ಡಿ: ನಾವು ಲೋಯರ್ ಪ್ರೈಮರಿ ಶಾಲೆಗಳಿಗೆ ಸರ್ವಶಿಕ್ಷಣ ಅಭಿಯಾನ ಯೋಜನೆಯಿಂದ ಪ್ರತಿ ವರ್ಷ ನಾವು 10,000 ರೂಪಾಯಿಗಳನ್ನು ಕೊಡುತ್ತೇವೆ. ಪ್ರತಿವರ್ಷ ಎಸ್. ಎಸ್. ಎನ್. ಯೋಜನೆಯಡಿ ಕೊಠಡಿಗಳ ರಿಪೇರಿಗಾಗಿ, 5,000 ರೂ.ಗಳಿಂದ 10,000 ರೂಪಾಯಿಗಳವರೆಗೆ ನೀಡುತ್ತಿದ್ದೇವೆ. ಹೋದ ವರ್ಷ ಅಂದರೆ2004–05 ರಲ್ಲಿ ನಾನ್ ಪ್ಲಾನ್ ಮತ್ತು ಪ್ಲಾನ್‌ನಲ್ಲಿ 13.00 ಕೋಟಿ ರೂಪಾಯಿಗಳನ್ನು ಈ ಶಾಲಾ ಕೊಠಡಿಗಳ ದುರಸ್ತಿಗೆಂದು ಬಿಡುಗಡೆಯಾಗಿದೆ. 2005–06ರಲ್ಲಿ ಅಂದರೆ ಈ ವರ್ಷವೂ ಕೂಡ 16.79 ಕೋಟಿ ರೂಪಾಯಿಗಳನ್ನು ನೀಡಲಿಕ್ಕೆ ಹಣ ಬಿಡುಗಡೆಯಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಕೊಠಡಿಗಳು ಸ್ವಾತಂತ್ರ್ಯಪೂರ್ವದಲ್ಲಿ ಕಟ್ಟಿರುವ ಬಹಳ ಹಳೆಯದಾಗಿವೆ, ಅದಕ್ಕಾಗಿ ಆರ್.ಐ.ಡಿ.ಎಫ್.ನಲ್ಲಿ 20.00 ಕೋಟಿ ರೂಪಾಯಿಗಳನ್ನು ದಿನಾಂಕ 31–3–2005ರಂದು ನಡೆಯಲಿರುವ ಮೀಟಿಂಗ್‌ನಲ್ಲಿ ಬಿಡುಗಡೆ ಮಾಡಲಾಗುತ್ತದೆ.

ಈ ವರ್ಷದ ಬಜೆಟ್‌ನಲ್ಲಿ ಹತ್ತು ಕೋಟಿ ರೂ.ಗಳನ್ನು ಜೂನಿಯರ್ ಕಾಲೇಜುಗಳಿಗಾಗಿ ಆರ್.ಯ.ಡಿ.ಎಫ್.ನಲ್ಲಿ ಸಾಲ ಪಡೆಯಲು ಪ್ರಾವಿಷನ್ ಇದೆ. ಎಸ್. ಎಸ್. ಎನ್.ನಲ್ಲಿ ಕೂಡ ಈ ವರ್ಷ ನಮಗೆ ಸೆಂಟ್ರಲ್ ಗೌರ್ನಮೆಂಟ್ ನಿಂದ ಸುಮಾರು 90.00 ಕೋಟಿ ಹೆಚ್ಚು ಹಣ ಬರುತ್ತದೆ. ಮೊದಲು ನೀಡುತ್ತಿದ್ದ ಹಣಕ್ಕಿಂತ ಹೆಚ್ಚು ಹಣ ಈ ವರ್ಷ ಬರುತ್ತದೆ. ನಮ್ಮ ಮ್ಯಾಚಿಂಗ್ ರೇಟ್ ಒಟ್ಟಾರೆ ಸುಮಾರು 580 ಅಥವಾ 590 ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ಬರುತ್ತದೆ. ಹಾಗಾಗಿ ನಾವು ಸಾಧ್ಯವಾದಷ್ಟು ಕೊಠಡಿಗಳು ಬಿದ್ದು ಹೋಗುವ ಪರಿಸ್ಥಿತಿಯಲ್ಲಿರುವಂತಹವುಗಳಿಗೆ ಹಾಗೂ ಕೊಠಡಿಗಳೇ ಇಲ್ಲದಿರುವಂತಹ ಶಾಲೆಗಳಿಗೆ ಪ್ರಿಯಾರಿಟಿ ಮೇಲೆ ಹಣ ಒದಗಿಸಲಾಗುತ್ತದೆ, ಪಟ್ಟಣ ಪ್ರದೇಶಗಳಲ್ಲಿ ಈ ಎಸ್. ಎಸ್. ಎನ್. ಯೋಜನೆಯಡಿ ಕಟ್ಟಡಗಳನ್ನು ಕಟ್ಟಲಿಕ್ಕೆ

ಉಪಾಧ್ಯಕ್ಷರು: ಕಾರಜೋಳರವರೇ ಪ್ರಶ್ನೆ ಅವರು ಕೇಳುತ್ತಿರುವುದು.

ಶ್ರೀ ಗಡ್ಡದೇವರ ಮಹ್ ಗಡ್ಡಯ್ಯ ಶಿವಮೂರ್ತಯ್ಯ: ನಿರ್ದಿಷ್ಟವಾಗಿ ಆ ಶಾಲಾ ಕಾಲೇಜುಗಳ ಹೆಸರುಗಳನ್ನು ಹಾಕಿಕೊಡುವ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ: ಕೆಲವು ಹಳ್ಳಿಗಳಲ್ಲಿ ಹಾಗೂ ಕೆಲವು ಪಟ್ಟಣಗಳಲ್ಲಿ ಬ್ರಿಟಿಷರ ಕಾಲದಲ್ಲಿ ಕಟ್ಟಿಸಿದ ಕೆಲವು ಕಟ್ಟಡಗಳಿವೆ, ಅವರು ಕೊಠಡಿಗಳ ಮೇಲೆ ಮಂಗಳೂರು ಹೆಂಚನ್ನು ಹಾಕಿರುತ್ತಾರೆ, ಆ ಹೆಂಚುಗಳು ಹಾಗೂ ಕೆಳಗೆ ಹಾಕಿರುವ ರಾಫ್ಟರ್ಸ್‌ಗಳೂ ಎಲ್ಲ ಕೊಳೆತು ಹೋಗಿ ಬಹಳಷ್ಟು ಕಡೆ ಹೆಂಚುಗಳು ಒಡೆದು ಹೋಗಿವೆ, ಹೀಗಾಗಿ ಇದರಿಂದ ಕೆಲವು ಶಾಲಾ ಕೊಠಡಿಗಳಲ್ಲಿ ಮಂಗಗಳೂ ಕೂಡಾ ಒಳಗೆ ಬರುತ್ತವೆ. ಇದರಿಂದ ಮಕ್ಕಳು ಅಂಜಿ ಹೊರಗೆ ಓಡಿ ಬರುವಂತಹ ಪ್ರಸಂಗಗಳನ್ನು ನಾನು ನೋಡಿರುತ್ತೇನೆ, ಅದಕ್ಕೆ ನನ್ನ ಸಲಹೆಯೇನೆಂದರೆ, ಈ ಮಂಗಳೂರು ಹೆಂಚುಗಳನ್ನು ತೆಗೆದು ಆರ್. ಸಿ.ಸಿ. ರೂಫಿಂಗ್ ಮಾಡಿಸಿದರೆ ಆಗುತ್ತದೆ. ಎಲ್ಲೆಲ್ಲಿ ಗೋಡೆಗಳು ಚೆನ್ನಾಗಿರುತ್ತವೆ. ಆರ್. ಸಿ.ಸಿ. ಲೋಡನ್ನು ತಡೆಯುವ ಶಕ್ತಿಯಿರುವ ಗೋಡೆಗಳಿಗೆ ಆರ್.ಸಿ.ಸಿ. ರೂಫಿಂಗ್ ಮಾಡಿಸಿದರೆ ಚೆನ್ನಾಗಿರುತ್ತದೆ. ಅದಕ್ಕಾಗಿ ನೀವು ಬರೇ ಐದು, ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟರೆ ಆಗುವುದಿಲ್ಲ. ಹಾಗಾಗಿ ಈ ರಿಪೇರಿಗಾಗಿ ಎಷ್ಟು ಮೊತ್ತ ಬೇಕಾಗುತ್ತದೆಂದು ಒಂದು ಎಸ್ಟಿಮೇಟ್ ಮಾಡಿಸಿ ಒಂದು ವಿಶೇಷವಾದ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಆರ್. ರಾಮಲಿಂಗಾರೆಡ್ಡಿ: ಉಡಿಗೆ ಕೋಣೆಗಳಿಗೂ ಸಹ ಈ ವರ್ಷ ಬಜೆಟ್

ನಲ್ಲಿ 30 ಕೋಟಿ ರೂಪಾಯಿಯ ಪ್ರಾವಿಷನ್ ಮಾಡಿದ್ದೇವೆ. ಒಂದು ಅಡುಗೆ ಕೋಣೆಗೆ 40,000 ರೂಪಾಯಿ ವೆಚ್ಚ ಬಂದರೂ ಸಹ ಏಳು ಅಡುಗೆ ಕೋಣೆಗಳಾಗುತ್ತದೆ. ಇವೆಲ್ಲವನ್ನೂ ನಮ್ಮ ಶಿಕ್ಷಣ ಇಲಾಖೆಯಿಂದ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಜಿಲ್ಲಾ, ತಾಲ್ಲೂಕು ಪಂಚಾಯತ್ ಇವರೆಲ್ಲರೂ ಸಹಕಾರವನ್ನು ಕೊಟ್ಟರೆ ಚೆನ್ನಾಗಿರುತ್ತದೆ. ಮೊನ್ನೆ ನಾನು ಮಂಗಳೂರಿಗೆ ಹೋಗಿದ್ದೇನು. ಉಡುಪಿಯಲ್ಲಿ ಜೆಡ್ ಪಿ, ಟಿಪಿ ಹಾಗೂ ನಗರಸಭೆಗಳಿಂದ ಕೂಡ ಎಲ್ಲಾ ಖರ್ಚನ್ನು ಭರಿಸಿದ್ದಾರೆ, ಇದೇ ರೀತಿ ಇಲ್ಲಿಯೂ ಕೂಡ ಜೆಡ್‌ಪಿ,ಟಿಪಿಗಳ ಸಹಕಾರ ದೊರೆತರೆ ನಮಗೂ ಕೂಡ ಸಹಾಯವಾಗುತ್ತದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2512

ಸದಸ್ಯರ ಹೆಸರು : ಶ್ರೀ ಹೆಚ್. ಹಾಲಪ್ಪ (ಹೊಸನಗರ)

ಉತ್ತರಿಸುವ ಸಚಿವರು : ಡಾ. ಹೆಚ್.ಸಿ. ಮಹದೇವಪ್ಪ(ಗ್ರಾಮಿಣಾಭಿವೃದ್ಧಿ ಪಂ.ರಾಜ್ ಸಚಿವರು)

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಹೊಸನಗರ ತಾಲ್ಲೂಕಿನಲ್ಲಿ ಕುಡಿಯುವ ನೀರಿಗಾಗಿ ತೆರೆದ ಬಾವಿಗಳ ಸಂಖ್ಯೆ ಎಷ್ಟು;	1963 ತೆರೆದ ಬಾವಿಗಳನ್ನು ಹೊಸನಗರ ತಾಲ್ಲೂಕಿನಲ್ಲಿ ಕುಡಿಯುವ ನೀರಿಗಾಗಿ ತೋಡಲಾಗಿದೆ.
ಆ.	ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯಿಂದ ತೆರೆದ ಬಾವಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)?	1)ಜಿಲ್ಲಾ ಪಂಚಾಯತ್ ವತಿಯಿಂದ 1630 2) ತಾಲ್ಲೂಕು ಪಂಚಾಯತ್ ವತಿಯಿಂದ 300 ಮತ್ತು 3) ಗ್ರಾಮ ಪಂಚಾಯತ್ ವತಿಯಿಂದ 33 ತೆರೆದ ಬಾವಿಗಳನ್ನು ತೋಡಲಾಗಿದೆ.